ಸಂಬಂಧ ಕಂದಾಯ ಇಲಾಖೆಗೆ ಮೋಜಣಿದಾರರನ್ನು ನಿಯೋಜನೆಗೊಳಿಸಲು ಪತ್ರ ಬರೆಯಲಾಗಿದ್ದು, ಮೋಜಣಿದಾರರ ನಿಯೋಜನೆ ನೀರೀಕ್ಷಿಸಲಾಗಿದೆ. ಶ್ರೀನಿವಾಸಪುರ ತಾಲ್ಲೂಕಿನ ಎಲ್ಲಾ 35 ಕೆರೆಗಳಲ್ಲಿ ಸರ್ವೆಕ್ಷಣಾ ಕಾರ್ಯವನ್ನು ಕೈಗೊಂಡುಒತ್ತುವರಿಯನ್ನು ತೆರವುಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.

157. **ಶ್ರೀ ಜಯಪ್ರಕಾಶ್ ಹೆಗ್ಡೆ ಕೆ.:–** ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಯಾವ ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲಾಗುತ್ತಿದೆ; ಇದರಿಂದಾದ ಅರಣ್ಯ ಪರಿಸರ ಹಾನಿ ಎಷ್ಟು;

(ಆ) ಇದರಿಂದಾಗಿ ಸರ್ಕಾರಕ್ಕೆ ಉಂಟಾದ ನಷ್ಟ ಎಷ್ಟು;

(ಇ) ಇದರ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಸಿ. ಚನ್ನಿಗಪ್ಪ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):–

(ಅ) ಬಳ್ಳಾರಿ, ಹೊಸಪೇಟೆ, ಸಂಡೂರು, ಹೊಸದುರ್ಗ, ಹೊಳಲ್ಕೆರೆ, ಚಿತ್ರದುರ್ಗ, ದಾವಣಗೆರೆ, ಉಡುಪಿ, ಶಿವಮೊಗ್ಗ, ಬೆಳಗಾವಿ, ಬಾಗಲಕೋಟೆ, ಸಾಗರ, ತುಮಕೂರು ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲಾಗುತ್ತಿದೆ.

ಆದರೆ ಗಣಿಗಾರಿಕೆಯಿಂದ ಅರಣ್ಯ ಪರಿಸರಕ್ಕೆ ಯಾವುದೇ ತರಹದ ಹಾನಿ ಉಂಟಾಗದಂತೆ ಪರಿಸರ ರಕ್ಷಣೆ ಕಾಯ್ದೆ 1986 (Environmental Protection Act 1986) ರಲ್ಲಿ ನಿಗದಿಪಡಿಸಿದ ಎಲ್ಲಾ ಮುಂಜಾಗ್ರತಾ ಕ್ರಮಗಳ ಜೊತೆಗೆ ಪ್ರತಿ ಪ್ರದೇಶದ ಅವಶ್ಯಕತೆಗನುಗುಣವಾಗಿ ಭೂಸಾರ ಮತ್ತು ತೇವಾಂಶ ಸಂರಕ್ಷಣಾ ಕೆಲಸಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಗಣಿ ಗುತ್ತಿಗೆದಾರರಿಗೆ ಕರಾರು ಪತ್ರದಲ್ಲಿ ಷರತ್ತುಗಳನ್ನು ವಿಧಿಸಿ, ಅದರಂತೆ ಅರಣ್ಯ ಪರಿಸರಕ್ಕೆ ಹಾನಿ ಉಂಟಾಗದಂತೆ ನಿಗದಿಪಡಿಸಿದ ಎಲ್ಲಾ ಪರಿಣಾಮಕಾರಿಯಾದ ಕ್ರಮಗಳನ್ನು ಜರುಗಿಸಲಾಗುತ್ತಿದೆ.

(ಆ) ಉದ್ಭವಿಸುವುದಿಲ್ಲ

(ಇ) ಗಣಿಗಾರಿಕೆಯಿಂದ ಅರಣ್ಯ ಪರಿಸರಕ್ಕೆ ಮಾರಕವಾಗಬಹುದಾದ ಪ್ರದೇಶಗಳಲ್ಲಿ ಗಣಿಗಾರಿಕೆ ನೀಡುತ್ತಿಲ್ಲ. ಎಲ್ಲಿ ಕನಿಷ್ಠ ಪ್ರಮಾಣದ ಪರಿಣಾಮವಿದೆಯೋ ಅಲ್ಲಿ ದೇಶದ ಅಭಿವೃದ್ಧಿ ದೃಷ್ಟಿಯಲ್ಲಿ ಗಣಿಗಾರಿಕೆಗೆ ಪರವಾನಗಿ ನೀಡಲೇ ಬೇಕಾದ ಪರಿಸ್ಥಿತಿ ಬಂದಾಗ ಅಂತಹ ಪ್ರದೇಶಗಳಲ್ಲಿ ಅದರ ನಿಯಂತ್ರಣಕ್ಕೆ ಪರಿಸರ ರಕ್ಷಣೆ ಕಾಯ್ದೆ 1986 (Environmental Protection Act 1986) ರಲ್ಲಿ ನಿಗದಿಪಡಿಸಿದ ಎಲ್ಲಾ ಮುಂಜಾಗ್ರತಾ ಕ್ರಮಗಳ

ಜೊತೆಗೆ ಪ್ರತಿ ಪ್ರದೇಶದ ಅವಶ್ಯಕತೆಗನುಗುಣವಾಗಿ ಭೂಸಾರ ಮತ್ತು ತೇವಾಂಶ ಸಂರಕ್ಷಣಾ ಕೆಲಸಗಳನ್ನು ಕಟ್ಟುನಿಟ್ಟಾಗಿ ಕೈಗೊಳ್ಳುವ ಮೂಲಕ ಗಣಿಗಾರಿಕೆಯಿಂದ ಅರಣ್ಯ ಪರಿಸರಕ್ಕೆ ಉಂಟಾಗುವ ಹಾನಿಯನ್ನು ತಡೆಗಟ್ಟಲಾಗುತ್ತದೆ.

414. **ಶ್ರೀ ವಿ. ಸೋಮಣ್ಣ:–** ಮಾನ್ಯ ಬೃಹತ್, ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರಿನ ಎನ್‌ಜಿಇಎಫ್ ಕಾರ್ಖಾನೆ ಯಾವಾಗ ಪ್ರಾರಂಭಿಸಲಾಯಿತು ಹಾಗೂ ಯಾವಾಗ ಮುಚ್ಚಲಾಯಿತು;

(ಆ) ಈ ಕಾರ್ಖಾನೆಯಲ್ಲಿ ಹಾಲಿ ಇರುವ ಕಾರ್ಮಿಕರ ಸಂಖ್ಯೆ ಎಷ್ಟು;

(ಇ) ಈ ಕಾರ್ಖಾನೆಯನ್ನು ಮುಚ್ಚಲು ಕಾರಣಗಳೇನು;

(ಈ) ಈ ಕಾರ್ಖಾನೆಗೆ ಸರ್ಕಾರ ಹೂಡಿರುವ ಬಂಡವಾಳವೆಷ್ಟು;

(ಉ) ಈ ಕಾರ್ಖಾನೆಯನ್ನು ಪುನರಾರಂಭಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಊ) ಇದಕ್ಕಾಗಿ ಸರ್ಕಾರ ವೆಚ್ಚ ಮಾಡುವ ಹಣವೆಷ್ಟು?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಮಾನ್ಯ ಬೃಹತ್, ಮಧ್ಯಮ ಕೈಗಾರಿಕಾ ಸಚಿವರು):–

(ಅ) ಪ್ರಾರಂಭವಾದ ದಿನಾಂಕ ಏಪ್ರಿಲ್ 1965, ಮುಚ್ಚಲಾದ ದಿನಾಂಕ ಡಿಸೆಂಬರ್ 2002.

(ಆ) ಈ ಕಾರ್ಖಾನೆಯಲ್ಲಿ ಹಾಲಿ ಯಾವುದೇ ಕಾರ್ಮಿಕರಿರುವುದಿಲ್ಲ

(ಇ) ಪ್ರತಿಕೂಲ ಮಾರುಕಟ್ಟೆ ಪರಿಸ್ಥಿತಿ, ಹಳೆಯ ತಂತ್ರಜ್ಞಾನ, ನಿರ್ವಹಣಾ ಚಾತುರ್ಯತೆಯ ಕೊರತೆ ಇತ್ಯಾದಿಯಿಂದಾಗಿ ಕಾರ್ಖಾನೆಯನ್ನು ಮುಚ್ಚಲಾಗಿದೆ.

(ಈ) ರೂ. 4199 ಲಕ್ಷ (ಷೇರು ಬಂಡವಾಳದ 90.28%)

(ಉ) ಕೇಂದ್ರ ಸರ್ಕಾರದ ಅನುಮೋದನೆ ಪಡೆದು ಷೇರು ಬಂಡವಾಳದ ಶೇ. 51ರಷ್ಟು ಭಾಗವನ್ನು ಓರ್ವ ಆಯಕಟ್ಟಿನ ಪಾಲುದಾರಿಗೆ ನೀಡಿ ಎನ್‌ಜಿಇಎಫ್‌ನ ಮೋಟಾರ್ಸ್ ಹಾಗೂ ಟ್ರಾನ್ಸ್‌ಫಾರ್ಮರ್ ವಿಭಾಗಗಳನ್ನು ಪುನಃಶ್ಚೇತನಗೊಳಿಸುವ ಬಗ್ಗೆ ಸರ್ಕಾರವು ಉದ್ದೇಶಿಸಿದೆ. ಇದಕ್ಕಾಗಿ ಸರ್ಕಾರದಿಂದ ಯಾವುದೇ ವೆಚ್ಚ ಮಾಡುವ ಅವಶ್ಯಕತೆಯಿರುವುದಿಲ್ಲ.